೬. ಧಾರವಾಡ ಜಿಲ್ಲಾ ಕುಂದಗೋಳ ತಾಲ್ಲೂಕು ಶಿಶುನಾಳ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ.

ಶ್ರೀ ಪಿ.ಸಿ. ಸಿದ್ದನಗೌಡರ್:- ಮಾನ್ಯ ಅಧ್ಯಕ್ಷರೆ, ಸಂತ ಶಿಶುನಾಳ್ ಷರೀಫರ ಜನ್ಮಸ್ಥಳವಾದ ಹಾಗೂ ಗುರುಗೋವಿಂದಭಟ್ಟರ ಜನ್ಮ ಸ್ಥಳವಾದ ಶಿಶುನಾಳ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರದ ಪ್ರವಾಸೋದ್ಯಮ ಇಲಾಖೆ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ. ಈ ಸ್ಥಳಕ್ಕೆ ಬರತಕ್ಕ ನಮ್ಮ ರಾಜ್ಯದವರು ಮಾತ್ರವಲ್ಲದೆ ಹೊರ ರಾಜ್ಯದ ಪ್ರವಾಸಿಗರಿಗೆ ಹಾಗೂ ಭಕ್ತಾದಿಗಳಿಗೆ ಯಾವುದೇ ಸೌಲಭ್ಯ ಮತ್ತು ಸೌಕರ್ಯಗಳು ದೊರಕುತ್ತಿಲ್ಲ. ಆದ್ದರಿಂದ ೧೯೯೩-೯೪ನೇ ಸಾಲಿನಲ್ಲಿ ಈ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಹಣವನ್ನು ಬಿಡುಗಡೆ ಮಾಡುವುದರ ಜೊತೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸನ್ಮಾನ್ಯ ಪ್ರವಾಸೋದ್ಯದು ಸಚಿವರಿಗೆ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಮಕೊರತೆಗಳ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಸಂತ ಶಿಶುನಾಳ ಶರೀಫರು ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತ. ಶಿಶುನಾಳ ಶರೀಫರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಇವರ ಗೀತೆಗಳು ಕರ್ನಾಟಕದಾದ್ಯಂತ ಜನಪ್ರಿಯವಾಗಿದೆ.

ಶಿಶುನಾಳ ಶರೀಫರ ಹಾಗೂ ಗುರು ಗೋವಿಂದ ಭಟ್ಟರ ಜನ್ಮಸ್ಥಳವಾದ ಕುಂದಗೋಳ ತಾಲ್ಲೂಕಿನ ಶಿಶುನಾಳ ಗ್ರಾಮ ಇತ್ತೀಚೆಗೆ ಘೋಷಿಸಲಾದ ಕರ್ನಾಟಕ ಪ್ರವಾಸೋದ್ಯಮ ನೀತಿಯ ಪ್ರಕಾರ 'ಬಿ' ಗುಂಪಿಗೆ ಸೇರಿದೆ. ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿಯಲ್ಲಿ ಖಾಸಗಿ ಉದ್ಯಮಿಗಳನ್ನು ತೊಡಗಿಸುವುದೇ ಸರ್ಕಾರದ ನೀತಿಯಾಗಿದೆ. ಅದರ ಅನುಸಾರ ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಸಬ್ಸಿಡಿ, ರಿಯಾಯಿತಿ, ಉತ್ತೇಜನಗಳನ್ನು ನೀಡಲಾಗುವುದು.

೭) ತುಮಕೂರು ಜಿಲ್ಲೆಯ ಯರಬಳ್ಳಿ ಗ್ರಾಮದಲ್ಲಿ ಕಳುವಾಗಿರುವ ಆಭರಣಗಳನ್ನು ಪತ್ತೆಹಚ್ಚಲು ಸಿ.ಓ.ಡಿ.ಗೆ ಒಪ್ಪಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಹಾಗಲವಾಡಿ ಹೋಬಳಿ, ಯರಬಳ್ಳಿ ಗ್ರಾಮದ ಶ್ರೀ ವೈ.ವಿ. ರಾಮಯ್ಯ ಬಿನ್ ಈರಪ್ಪನವರು ಚೇಳೂರು ಪೋಲೀಸ್ ಠಾಣೆಗೆ ಹೋಗಿ ತಾರೀಖು ೧೪-೩-೧೯೯೨ ರಂದು ಕಂಪ್ಲೆಂಟ್ ಸಲ್ಲಿಸಿದ್ದು, ಆ ಕಂಪ್ಲೆಂಟ್ ಸಿಆರ್ ನಂ:೪೪-೯೨ ರ ಪ್ರಕಾರ ಕೇಸ್ ರಿಜಿಸ್ಟರ್ ಆಗಿದ್ದು ಇದುವರೆಗೂ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅರ್ಜಿದಾರರು ಅನೇಕ ಭಾರಿ ಮೇಲಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದರೂ ಕೂಡ ಯಾವುದೇ ಕಾರ್ಯಕ್ರಮವನ್ನು ಮಾಡಿಲ್ಲ. ಅರ್ಜಿದಾರನು ಈಗಾಗಲೇ ೪೦ ಸಾವಿರಕ್ಕೂ ಹೆಚ್ಚು ಬೆಲೆಬಾಳುವ ಆಭರಣಗಳನ್ನು ಕಳೆದುಕೊಂಡಿದ್ದು ಅಪರಾಧಿಗಳು ಅವರ ಎದುರಿಗೇ ಓಡಾಡುತ್ತಿದ್ದರೂ ಕೂಡ ಪೋಲೀಸರು ಅವರನ್ನು ಇದುವರೆಗೂ ಬಂಧಿಸಿರುವುದಿಲ್ಲ. ಪೋಲೀಸರು ಅಪರಾಧಿಗಳ ಜೊತೆಗೆ ಶಾಮೀಲಾಗಿದ್ದಾರೆ ಎಂಬುದು ಈಗಾಗಲೇ ಎಲ್ಲರಿಗೂ ತಿಳಿದ ಅಂಶವಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರವನ್ನು ಸಿ.ಓ.ಡಿ.ಗೆ ಒಪ್ಪಿಸಿ ಅರ್ಜಿದಾರರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ. ದಿನಾಂಕ : ೧೩-೮-೧೯೯೨ ರಂದು ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಯರಬಳ್ಳಿ ಗ್ರಾಮದ ಶ್ರೀ ವೈ.ವಿ. ರಾಮಯ್ಯನವರು ಚೇಳೂರು ಪೋಲೀಸ್ ಠಾಣೆಗೆ ಬಂದು